**ಸಾಕ್ಷಿಯನ್ನು ದಿನಾಂಕಃ 06.10.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ತೀರ್ಪುಋಣಿದಾರರ ಪರ ಶ್ರೀ.ಬಿ.ಎಲ್.ಟಿ. ವಕೀಲರಿಂದಃ**

ನಿ.ಪಿ.-4 ರಲ್ಲಿ ಸ.ನಂ. 3/3 ರಲ್ಲಿ ತೀರ್ಪುಋಣಿಯು 02 ಎಕರೆ 01 ಗುಂಟೆ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆಂದು ಹೇಳಿರುತ್ತಾರೆಂದರೆ ಸರಿಯಲ್ಲ. ಸದರಿ ತೀರ್ಪಿನಲ್ಲಿ ಚೆಕ್ ಬಂದಿಯನ್ನು ತಪ್ಪಾಗಿ ನಮೂದಿಸಿರುತ್ತಾರೆ ಎಂಬ ಕಾರಣದಿಂದ ವಜಾ ಆಗಿರುತ್ತದೆ ಎಂದರೆ ನಮ್ಮ ಜಮೀನಿನ ಚೆಕ್ ಬಂದಿಯನ್ನು ಸೇರಿಸಿ ನಮೂದಿಸಿದ್ದರಿಂದ ಅದು ವಜಾ ಆಗಿರುತ್ತದೆ. ತೀರ್ಪುಋಣಿಯು ದಿನಾಂಕಃ 06.07.2006 ರಂದು ಹುಣಸೂರು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ನಂತರ ನನ್ನ ತಾಯಿ ಮೂಲ ದಾವೆ ಸಂಖ್ಯೆ 171/2006 ರಂತೆ ದಿನಾಂಕಃ 04.09.2006 ರಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ತೀರ್ಪುಋಣಿ ಅವಿದ್ಯಾವಂತರು ಎಂದರೆ ಸರಿಯಲ್ಲ. ನಾನು ಡಿಪ್ಲೊಮೋ ಇಂಜಿನೀಯರಿಂಗ್ ಪದವಿ ಪಡೆದಿರುತ್ತೇನೆ. ತೀರ್ಪುಋಣಿ ಹುಣಸೂರು ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆಯಲ್ಲಿ ಹೆಚ್.ಡಿ. ಕೋಟೆ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸುವ ಬದಲು ಹುಣಸೂರು ನ್ಯಾಯಾಲಯಕ್ಕೆ ಸಲ್ಲಿಸಿದ್ದರಿಂದ ಹೆಚ್.ಡಿ.ಕೋಟೆ ನ್ಯಾಯಾಲಯದಲ್ಲಿ ಪರಿಹಾರ ಪಡೆದುಕೊಳ್ಳುಬಹುದಿತ್ತು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿರುತ್ತದೆ ಎಂದರೆ ಇರಬಹುದು. ನಿ.ಡಿ.-3 ರಲ್ಲಿರುವ ಬಾಜೂದಾರರ ವಿಳಾಸ ಎಂದು ನಮೂದಿಸಿರುವ ಮುಂಭಾಗದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿಯು ನಿ.ಡಿ.-3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಡಿ.-3(ಎ) ಎಂದು ಗುರುತಿಸಲಾಯಿತು. ನಿ.ಡಿ.-1 ನನ್ನ ತಾಯಿಗೆ ಬಂದಿರುವ ನೋಟೀಸ್ ಆಗಿರುತ್ತದೆ ಎಂದರೆ ಸರಿ. ತೀರ್ಪುಋಣಿಯು ಸರ್ವೆಗಾಗಿ ಅರ್ಜಿ ಸಲ್ಲಿಸಿದ್ದು, ಅದರಂತೆ ಭೂ ಮಾಪಕರು ಅಳತೆ ಮಾಡಲು ಬಂದಿದ್ದರು ಎಂದರೆ ಸರಿ ಆದರೆ ಆ ಸಂದರ್ಭದಲ್ಲಿ ನಾವು ಇರಲಿಲ್ಲ, ನಮಗೆ ಯಾವುದೇ ಮಾಹಿತಿ ಇರಲಿಲ್ಲ ಮತ್ತು ನಕ್ಷೆಗೆ ನಮ್ಮ ಸಹಿ ಪಡೆದಿಲ್ಲ. ನಿ.ಡಿ.-4 ರಲ್ಲಿ ಭೂ ಮಾಪಕರು ಅಳತೆಗೆ ಬಂದಾಗ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ವಿವಾದ ಬಾಕಿ ಇರುವುದರಿಂದ ಅಳತೆ ಮಾಡುವುದು ಬೇಡ ಎಂದು 2 ನೇ ಬಾರಿ ಸರ್ವೆ ಮಾಡಲು ಬಂದಾಗ ನಾನು ತಕರಾರು ವ್ಯಕ್ತಪಡಿಸಿರುತ್ತೇನೆ. ನಮ್ಮ ಪರವಾಗಿ ಶಾಶ್ವತ ನಿರ್ಬಂಧಕಾಜ್ಞೆ ಆದೇಶವಾದ ನಂತರ ರಕ್ಷಣೆ ಕೊಡಿ ಎಂದು ನಾವು ತಹಶೀಲ್ದಾರ್ ಕಛೇರಿಗೆ ಅರ್ಜಿ ನೀಡಿದ್ದೆವು. ನಿ.ಡಿ.-5 ತಹಶೀಲ್ದಾರ್ ಕಛೇರಿಗೆ ನಾವು ನೀಡಿರುವ ಅರ್ಜಿಯಾಗಿರುತ್ತದೆ ಎಂದರೆ ಸರಿ. ಅಮಲ್ದಾರಿ ಅರ್ಜಿಯಲ್ಲಿ

**Ex.No. 25/2012**
**ಪಿ.ಡಬ್ಲ್ಯು-01**

ನಮೂದಿಸಿರುವಂತೆ ಪೂರ್ವಕ್ಕೆ – ಮರಮ್ಮರವರ ಜಮೀನು ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ಅದೇ ರೀತಿ ನಿ.ಪಿ.–2 ರಲ್ಲಿಯೂ ಕೂಡ ಪೂರ್ವಕ್ಕೆ – ಮರಮ್ಮರವರ ಜಮೀನು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮರಮ್ಮ ಉರ್ಫ್ ಮರಪ್ಪ ಉರ್ಫ್ ಸಿದ್ಧರಾಮಪ್ಪ ಎಂತಲೂ ಕರೆಯುತ್ತಾರೆ. ನಿ.ಡಿ.–5 ರಲ್ಲಿ ಪೂರ್ವಕ್ಕೆ – ಸಿದ್ಧರಾಮಪ್ಪ ಬಿನ್ ಮರಪ್ಪ ಎಂದು ನಮೂದಿಸಿರುತ್ತೇವೆ ಎಂದರೆ ಸರಿ. ನಮಗೆ ರಕ್ಷಣೆ ಕೊಡಿ ಎಂದು ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟ ನಂತರ ಅವರು ಸ್ಥಳಕ್ಕೆ ಬಂದು ಯಾವುದೇ ವಿಚಾರಣೆ ಮಾಡಿಲ್ಲ. ತೀರ್ಪುಋಣಿಯು ಅಳತೆ ಮಾಡಲು 02 ಬಾರಿ ಅರ್ಜಿ ಸಲ್ಲಿಸಿದ್ದರು. ತೀರ್ಪುಋಣಿಯು ನಮ್ಮ ಆಸ್ತಿಯ ಚೆಕ್ ಬಂದಿಯನ್ನು ಸೇರಿಸಿ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನು ಮತ್ತು ತೀರ್ಪುಋಣಿಯವರ ಜಮೀನನ್ನು ಅಳತೆ ಮಾಡಲು ನ್ಯಾಯಾಲಯದಿಂದ ನಿಯೋಗಿಯವರನ್ನು ನೇಮಕ ಮಾಡಲು ಯಾವುದಾದರು ತೊಂದರೆ ಇದೆಯಾ ಎಂದರೆ ನಮ್ಮ ಕ್ರಯ ಪತ್ರದ ಪ್ರಕಾರ ನಾವು ಪ್ರಸ್ತುತ ಸ್ವಾಧೀನದಲ್ಲಿರುವಂತೆ ಅಳತೆ ಮಾಡಿ ನಕ್ಷೆ ತಯಾರಿಸಿದರೆ ನನ್ನದೇನು ತೊಂದರೆ ಇರುವುದಿಲ್ಲ. ಅದರಂತೆ ತೀರ್ಪುಋಣಿಯವರ ಜಮೀನನ್ನು ಅಳತೆ ಮಾಡಲು ನನ್ನದೇನು ಅಭ್ಯಂತರವಿಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**